ನೋಡ್ಕೋ' ಅಂದ ಖಾರವಾಗಿ. 'ಸಂದೀಪ್ ನಾನು ದಿನಕ್ಕೆ ಹತ್ತು ಗಂಟೆ ದುಡೀತಿದ್ದೀನಿ ಆಫೀಸ್‌ನಲ್ಲಿ. ನೀನು ಹೀಗೆ ಹೇಳಿದ್ರೆ... ಐ ಹ್ಯಾವ್ ಎ ಫ್ಯಾಮಿಲಿ ಯು ನೋ' ಅಂದೆ. ಸರ್‍ರಂತ ಸಿಟ್ಟುಗೊಂಡು 'ಡೋಂಟ್ ಬ್ರಿಂಗ್ ಯುವರ್ ಹೋಮ್ ಟು ಆಫೀಸ್' ಅಂದು ಬಿಟ್ಟ! ನೋಡು ಗೋಪು ನಾವು ಲೇಡೀಸ್ ಎಷ್ಟು ಕಷ್ಟಪಟ್ಟು ದುಡಿದ್ರು ಇಂತ ಮಾತುಗಳ್ನ ಕೇಳಿಸ್ಕೋಳ್ಳೋದ್ ತಪ್ಪಲ್ಲ' ಅಂದಳು. 'ಹೋ ಪ್ರಿಯಾ, ಯೂ ಕಾಂಟ್ ಟಾಕ್ ಲೈಕ್ ದಟ್. ದಿಸ್ ಇಸ್ ಪ್ರಾಜೆಕ್ಟ್ ಮ್ಯಾನೇಜ್ಮೆಂಟ್. ಕೆಲಸ ಮಾಡುವವರು ಹೆಣ್ಣೋ ಗಂಡೋ... ಅವರ ಫ್ಯಾಮಿಲಿ ಸಮಸ್ಯೆಗಳೇನಿರ್ತವೆ ಅದೆಲ್ಲ ಯೋಚ್ನೆ ಮಾಡಿದ್ರೆ ಅವ್ನು ಈ ಪ್ರಾಜೆಕ್ಟ್ ಮಾಡಿಸಕ್ಕಾಗಲ್ಲ. ನಿಮಗೆಲ್ಲ ಇಷ್ಟು ಸಂಬಳ ಕೊಟ್ಟು ಇಟ್ಕೊಂಡಿರೋದ್ ಈ ಥರ ದುಡಿಸ್ಕೊಳಕ್ಕೆ. ಹೋಗ್ಲಿ ಬಿಡು. ಆಫೀಸನ್ನ ಮನೆಗ್ ತರ್ಬೇಡ... ಬಾ... ಅಮ್ಮ ಅಡ್ಗೆ ಮಾಡಿದ್ದಾಳೆ. ಊಟ ಮಾಡೋಣ ಪಾಪ ಶೀ ಈಸ್ ವೈಟಿಂಗ್... ನಿಧಿ ಮಲಗಿ ಬಿಟ್ಟ. ಅಮ್ಮ ಊಟ ಮಾಡಿಸಿ ಮಲಗಿಸಿದ್ಲು' ಎಂದು ಮುನ್ನಡೆದ.

'ಆಫೀಸ್ನ ಮನೆಗ್ ತರ್ಬೇಡ' ಅಂದ ಮಾತೇ ರಿಂಗಣಿಸಿ ತಲೆಯಲ್ಲಿ ಕೊರೆಯತೊಡಗಿತು. ಡೈನಿಂಗ್ ಟೇಬಲ್ಲಿನ ಮೇಲೆ ತಲೆ ಇಟ್ಟು ಮಲಗಿದ್ದ ಅತ್ತೆಯನ್ನು ನೋಡುತ್ತಲೇ ಅವಳ ಆತಂಕದ ಮಟ್ಟ ಮತ್ತಷ್ಟು ಏರಿತು. ಹೋಗಿ ಕುರ್ಚಿಯಲ್ಲಿ ಕೂತೊಡನೆ 'ಯಾಕಿಷ್ಟು ಹೊತ್ತು ಪ್ರಿಯಾ? ನಂಗೂ ಕಾದೂಕಾದೂ ಸಾಕಾಯ್ತು. ಲೇಟಾಗಿ ಹಸಿವೇನೆ ಹೊರಟೋಯ್ತು. ನಾನು ಹೋಗಿ ಮಲಗ್ತೀನಿ ನೀವಿಬ್ರು ಊಟ ಮಾಡಿ' ಎಂದವಳನ್ನು ಅನುನಯಿಸುತ್ತಾ 'ಸಾರಿ ಅತ್ತೆ ವಾಪಸ್ ಬರ್ತಾ ಟ್ರಾಫಿಕ್ಕಲ್ಲಿ ಸಿಕ್ಹಾಕೊಂಡೆ. ಲೇಟ್ ಆಯ್ತು. ನೀವೂ ಬನ್ನಿ ಒಟ್ಗೆ ಊಟಾ ಮಾಡಣ. ನಿಧಿ ಊಟ ಮಾಡಿದ್ನ? ನನ್ನ ಕೇಳಿದ್ನ?' ಅಂದವಳನ್ನ ದೀರ್ಘವಾಗಿ ನೋಡಿ 'ಇನ್ನೇನ್ ಮಾಡ್ತಾನೆ ಪಾಪ ನೀನೇನು ಬಂದು ಊಟ ಹಾಕಲ್ಲ ಅನ್ನದು ಅವನ್ಗು ಗೊತ್ತಾಗೋಗಿದೆ. ನನ್ನತ್ರಾನೆ ಊಟ ನಂಜೊತೇನೇ ನಿದ್ದೆ ಅಭ್ಯಾಸವಾಗೋಗಿದೆ. ನಂಗೂ ಸಾಕಾಗುತ್ತೆ ಪ್ರಿಯಾ ಬೆಳಗಿಂದ ರಾತ್ರಿವರ್ಗು... ಏನ್ ಮಾಡದು ನನ್ನ ಕರ್ಮ' ಎಂದು ಗದ್ಗದವಾಗಿ ನುಡಿದ ಅತ್ತೆಗೆ ಸಾರಿ ಕೇಳಬೇಕೋ ಇಲ್ಲವೋ ಎನ್ನುವುದೂ ಗೊತ್ತಾಗದಷ್ಟು ತಲೆ ಬ್ಲಾಂಕ್ ಆಯಿತು. ಕಣ್ಣಿಂದ ಪಟಪಟನೆ ಕಂಬನಿಯುದುರತೊಡಗಿತು. ಕೂತಿದ್ದ ಕುರ್ಚಿಯಿಂದೆದ್ದು ಧಡಧಡನೆ ರೂಮಿಗೆ ಹೋಗಿ ಬಾಗಿಲು ರಾಚಿದಳು. 'ಇವ್ಳದ್ದು ದಿನಾ ಇದೇ ಆಯ್ತು... ನೀನೇನು ತಲೆಕೆಡಿಸ್ಕೋಬೇಡಮ್ಮ, ನಂಗೆ ಊಟ ಹಾಕು' ಎಂದ ಮಗನಿಗೆ ಬಡಿಸುತ್ತಾ 'ಹೋಗ್ಲಿ ಬಿಡಪ್ಪ ನಿನ್ನ ಹಣೆಬರಾನು ಚೆನ್ನಾಗಿಲ್ಲ. ಹೊತ್ತು ಗೊತ್ತಿಲ್ದೆ ಬರ್ತಾಳೆ, ಏನಾದ್ರು ಅಂದ್ರೆ ಹಿಂಗೆ ರಂಪ ಮಾಡ್ತಾಳೆ' ಎನ್ನುತ್ತಾ ನಡುನಡುವೆ ಮಗನಿಗೆ ಉಪಚರಿಸುತ್ತಾ ಬಡಿಸಿ ತಾನೂ ಊಟ ಮಾಡಿದಳು. ತಟ್ಟೆ ಲೋಟಗಳನ್ನು ಸಿಂಕಿಗೆ ಹಾಕಿ ಉಳಿದಿದ್ದು ಮುಚ್ಚಿಡಲು ಸಹಾಯ ಮಾಡಿ 'ಗುಡ್‌ನೈಟ್ ಅಮ್ಮ ಮಲಕ್ಕೋ ಹೋಗು' ಎಂದು ರೂಮಿಗೆ ಹೋದ.

ಓತಪ್ರೋತವಾಗಿ ಕಂಬನಿ ಸುರಿಸುತ್ತಾ, ದಿಂಬನ್ನು ಆತು ಹಿಡಿದು ಮಂಚದಂಚಿಗೆ ಮಲಗಿದ್ದವಳನ್ನು ನೋಡಿ ಮುಖ ಕ್ರುದ್ಧವಾಗಿ ಧ್ವನಿ ಹರಿತವಾಗಿ 'ವಾಟ್ ನಾನ್‌ಸೆನ್ಸ್ ಈಸ್ ದಿಸ್ ಪ್ರಿಯಾ? ಯೂ ಆರ್ ಬಿಕಮಿಂಗ್ ವಲ್ನರಬಲ್... ಬೆಳಗ್ಗಿಂದ ಮನೇಲಿ ಕೆಲಸ ಮಾಡಿ ಸಾಕಾಗಿರ್ತಾಳೆ ಅಮ್ಮ. ಮಗೂನು ಅವಳೆ ನೋಡ್ಕೋತಾಳೆ. ಒಂದು ಮಾತು ಅಂದ್ರೆ ಯಾಕಷ್ಟು ಸಿಟ್ಟಾಗ್ಬೇಕು ನೀನು? ದಿನಾ ಇದೇ ಆದ್ರೆ ಬದುಕೋದು ಹೆಂಗೆ? ಯೂ ಆರ್ ವೆರಿ ಸ್ಟುಪಿಡ್' ಎಂದವನ ಮಾತಿಗೆ ಮತ್ತಷ್ಟು ಅಳುವಿನ ರಭಸ ಜಾಸ್ತಿಯಾಯಿತು. ಅಳುಬುರುಕು ಗಾರುಗಾರ ಧ್ವನಿಯಲ್ಲಿ 'ನೀನು ಮನೇಗ್ ಬೇಗ ಬರ್ತೀಯಲ್ಲ. ನೀನು ಒಂಚೂರು ಅಮ್ಮಂಗೆ ಹೆಲ್ಪ್ ಮಾಡ್ಬೋದಲ್ಲ. ವೈ ಕಾಂಟ್ ಯೂ ಟೇಕ್ ಕೇರ್ ಆಫ್ ನಿಧಿ? ಅವ್ನು ನಿಂಗೂ ಮಗ ಅಲ್ವ?' ಎಂದವಳನ್ನು ಕೆಕ್ಕರಿಸಿ ನೋಡುತ್ತಾ 'ನಾನು ನಿನಗಿಂತ ದೊಡ್ಡ ಕೆಲ್ಸದಲ್ಲಿದ್ದೀನಿ ನನ್ನ ರೆಸ್ಪಾನ್ಸಿಬಿಲಿಟಿಸ್ ತುಂಬ ದೊಡ್ಡದು. ಸಾಕಾಗಿ ಬಂದು ರಿಲ್ಯಾಕ್ಸ್ ಆಗಕ್ಕೂ ಟೈಮಿಲ್ಲ ಅಂದ್ರೆ ಮನೆ ಯಾಕ್ ಬೇಕು? ನಿನ್ನ ದರಿದ್ರ ಫೆಮಿನಿಸಮ್ ಕಟ್ಟಿಡು. ಲೈಫ್ ಈಸ್ ಡಿಫರೆಂಟ್. ಸಲೀಸಾಗಿ ನಡೆಯೋ ಹಂಗೆ ಲೈಫ್ ಸ್ಟೈಲ್ ಮಾಡ್ಕೋ' ಅಂದ. 'ಅಡಿಗೆಗೆ ಕುಕ್, ಮಗು ನೋಡ್ಕೋಳ್ಳೋಕೆ ಒಂದು ನ್ಯಾನಿ ಇಟ್ಕೋಳೋಣ ಅಂತ ಹೇಳಿದ್ರೆ ಅಮ್ಮ ಮಗ ಇಬ್ರು ಬೇಡ ಅಂತೀರಿ. ನಾನು ಬಂದ ತಕ್ಷಣ ದಿನಾ ರಗಳೆ... ಚುಚ್ಚಿಚುಚ್ಚಿ ಮಾತಾಡ್ತೀರಿ. ನಾನೂ ಕೆಲಸ ಮಾಡಿನೇ ಮನೆಗೆ ಬರದು. ನಿಮಗಿಂತ ಹತ್ರಷ್ಟು ಸ್ಟ್ರೆಸ್ ನಂಗೂ ಇದೆ' ಎಂದಳು. ಆವೇಗದಿಂದ